ಅವಳ ಮಾತು ಕೇಳಿ ಮೋಹನನಿಗೆ ತಿಂದಿದ್ದೆಲ್ಲಾ ಎದೆಗೆ ಬಂದಂತಾಗಿ, ಬೆವರೊಡೆಯಿತು.

'ಮತ್ತ್ಯಾಕೆ... ನೀವು ನನಗೆ...' ಎನ್ನುವಷ್ಟರಲ್ಲಿ ಅವಳು,

'ನಾನೇ ನಿಮಗೆ ಸುಳ್ಳು ಹೇಳಿದೆ. ಈಗ ನಿಜ ಏನಂತ ಹೇಳ್ತಿನಿ. ಕಾಸ್ಮೆಟಿಕ್ ಕಂಪನೀಲಿ ಮ್ಯಾನೇಜರ್ ಪೋಸ್ಟ್‌ಗೆ ಅಪಾಯಿಂಟ್ ಆದಮೇಲೆ ಬೆಂಗಳೂರಿಗೆ ಬಂದು ಸೇರಿ ಹತ್ತು ವರ್ಷ ಆಗೋಯ್ತು. ನನಗೆ ಅಪ್ಪ ಇಲ್ಲ, ಅಮ್ಮ ಊರಲ್ಲಿದ್ದಾರೆ. ನಾನೊಬ್ಬಳೇ ಮಗಳು. ಬೆಂಗಳೂರಿಗೆ ಬಂದ ಮೇಲೆ ಇಲ್ಲಿನ ಬದುಕಿಗೆ ಹೊಂದಿಕೊಂಡೆ. ಐದು ವರ್ಷ ಕಳೆದಮೇಲೆ ಅದೇ ಕಂಪನೀಲಿ ಸಿನಿಯರ್ ಮ್ಯಾನೇಜರ್ ಆದೆ. ಕೆಲಸ ಮಾಡತಾ ಮಾಡತಾ ಯಾಕೊ ಮದುವೆ ಮಾಡಿಕೊಬೇಕು ಅನಿಸಲೇ ಇಲ್ಲ. ಹೀಗೇ ಇದ್ದೀನಿ' ಎಂದು ಅವನ ಮುಖ ನೋಡಿದಳು. ಅವನಿಗೆ ಭಯದಿಂದ ಖುಷಿ ಪಡಬೇಕೊ, ಅನುಮಾನ ಪಡಬೇಕೊ ತಿಳಿಯದಾಯಿತು.

'ಮೇದಿನಿ, ಮನೆಗೆ ಕರಕೊಂಡು ಬಂದು ಒಳ್ಳೆ ಶಾಕ್ ಕೊಟ್ರಿ. ನೀವು ಹೀಗಿರಬಹುದು ಅಂತ ನಾನು ಕನಸಲ್ಲೂ ಯೋಚನೆ ಮಾಡಿರಲಿಲ್ಲ. ನನ್ನ ಕಲ್ಪನೆಯ ಮೇದಿನಿನೇ ಬೇರೆಯಾಗಿದ್ರು.'

'ಅಂದ್ರೆ, ಈಗ ನಾನು ಇರೋ ರೀತಿ ಚೆನ್ನಾಗಿಲ್ಲ ಅಂತೀರಾ?'

'ಹಾಗಲ್ಲಾ ಹಾಗಲ್ಲಾ... ನೀವು ನಾನು ಕಲ್ಪಿಸಿಕೊಂಡಿದ್ದಕ್ಕಿಂತ ತುಂಬಾ ಭಿನ್ನವಾಗಿದ್ದೀರಿ ಅಂದೆ. ಎಲ್ಲಾ ನಾನು ಕಲ್ಪಿಸಿಕೊಂಡಿರೊ ತರಾನೇ ಇರಬೇಕು ಅಂತ ಏನಿಲ್ಲವಲ್ಲಾ' ಎಂದು ಅವನು ಎದ್ದು ವಾಶ್‌ಬೇಸಿನ್ ಕಡೆಗೆ ಹೋಗಿ ಕೈ ತೊಳೆದುಕೊಂಡು ಬಂದ. ಅವಳೂ ಕೈ ತೊಳೆದುಕೊಂಡಳು. ಅವನು ಸೋಫಾದಲ್ಲಿ ಕುಳಿತಾಗ, ಅವಳು ಬಾಳೆಹಣ್ಣು, ವೀಳ್ಯದೆಲೆ ತಂದಿಟ್ಟಳು. ಅವನು ಹಣ್ಣೊಂದನ್ನು ತೆಗೆದುಕೊಂಡು ಸಿಪ್ಪೆ ಸುಲಿಯುತಿದ್ದಾಗ—

'ನೀವು ಹಣ್ಣು ತಿನ್ನತಾ ಇರಿ ಎರಡು ನಿಮಿಷ ಬಂದೆ' ಎಂದು ಮೇದಿನಿ ಬೆಡ್ ರೂಮಿನತ್ತ ನಡೆದಳು. ಅವನು ಎರಡು ಹಣ್ಣು ತಿಂದು, ಬಳಿಕ ಎಲೆ ಅಡಿಕೆ ಸುಣ್ಣ ಸುತ್ತಿಕೊಂಡು ಬಾಯಿಗೆ ಹಾಕಿಕೊಂಡ.

ಸ್ವಲ್ಪ ಹೊತ್ತಿನ ಬಳಿಕ— 'ಮೋಹನ್... ಸ್ವಲ್ಪ ಇಲ್ಲಿ ಬನ್ನಿ...' ಎಂದು ಒಳಗಿನಿಂದ ಅವಳು ಕೂಗಿದ ಧ್ವನಿ ಕೇಳಿಸಿತು. ಮೋಹನ ಎಲೆ ಅಡಿಕೆ ಮೆಲ್ಲುತ್ತ ಅತ್ತ ನಡೆದ.


## ಕುಮಾರ ಬೇಂದ್ರೆ

ಪತ್ರಕರ್ತರಾಗಿದ್ದ ಕುಮಾರ ಬೇಂದ್ರೆ ಮಾಧ್ಯಮ ಕ್ಷೇತ್ರ ತೊರೆದು ಸದ್ಯ ಚಲನಚಿತ್ರ ನಿರ್ದೇಶನದಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಎಂ.ಎ. ಪದವೀಧರ. ಎರಡು ದಶಕಗಳಿಂದ ಸಾಹಿತ್ಯ ಕೃಷಿಯಲ್ಲಿ ಸಕ್ರಿಯರು. 'ಮಾದಪ್ಪನ ಸಾವು', 'ಅದೃಶ್ಯ ಲೋಕದ ಮಾಯೆ', 'ನಿರ್ವಾಣ', 'ಗಾಂಧಿ ವೃತ್ತದ ದಂಗೆ' ಕಥಾಸಂಕಲನಗಳಾದರೆ, 'ಮನಸೆಂಬ ಮಾಯಾವಿ' ಆಯ್ದ ಕತೆಗಳ ಸಂಕಲನವಾಗಿದೆ. 'ಜೋಗವ್ವ', 'ತಲ್ಲಣ', 'ನೆಲೆ' ಕಾದಂಬರಿ ಸೇರಿದಂತೆ 10 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಹುಬ್ಬಳ್ಳಿಯಲ್ಲಿ ವಾಸ.